# ಶ್ರೀಮಾತೆಯವರ ವಿವೇಕಪ್ರಜ್ಞೆ

❑ ಸ್ವಾಮಿ ಪುರುಷೋತ್ತಮಾನಂದ

**ಶ್ರೀಮಾತೆಯವರ ವ್ಯಾವಹಾರಿಕ ಪ್ರಜ್ಞೆ ಮತ್ತು ವಿವೇಕಯುಕ್ತ ನಡತೆ ಅಪೂರ್ವವಾದುವು. ಅವರ ಜೀವನದ ಕೆಲವು ಘಟನೆಗಳ ಮೂಲಕ ಪೂಜ್ಯ ಪುರುಷೋತ್ತಮಾನಂದಜಿಯವರು ವಿಮರ್ಶಾತ್ಮಕವಾಗಿ ಶ್ರೀಮಾತೆಯವರ ಪ್ರತಿಯೊಂದು ನಡೆನುಡಿಯೂ ಎಷ್ಟೊಂದು ಬೋಧಪ್ರದ ಎಂಬುದನ್ನು ವಿವರಿಸಿದ್ದಾರೆ. ಶ್ರೇಷ್ಠ ಲೇಖಕರೂ ಉತ್ತಮ ಗಾಯಕರೂ ಆದ ಪೂಜ್ಯರು ಪ್ರಸ್ತುತ ಬೆಳಗಾವಿ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿರುವರು.**

ಶ್ರೀಮಾತೆ ಶಾರದಾದೇವಿಯವರು ತಮ್ಮ ಜೀವಿತಾವಧಿಯಲ್ಲಿ ಹೆಜ್ಜೆ ಹೆಜ್ಜೆಗೂ ಪರಮಾದ್ಭುತ ವಿವೇಕಪ್ರಜ್ಞೆಯನ್ನು ತೋರಿದ್ದಾರೆ. ಅವರ ಪ್ರತಿಯೊಂದು ನಡೆ-ನುಡಿಯೂ ಅಪೂರ್ವ ವಿವೇಕದಿಂದ ಒಡಮೂಡಿದ್ದು. ನಿಜಕ್ಕೂ, ಅವರ ಸಮಗ್ರ ಜೀವನವೇ ಒಂದು ನಿತ್ಯನಿರಂತರ ವಿವೇಕಬೋಧೆ!



ವಿವೇಕವೆಂದರೆ ಯಾವುದು ಸರಿ, ಯಾವುದು ತಪ್ಪು ಎಂಬ ತಿಳಿವು ಎಂಬುದೇನೋ ಎಲ್ಲರಿಗೂ ತಿಳಿದದ್ದೇ. ಆದರೆ ಕೆಲವೊಮ್ಮೆ ಸರಿ-ತಪ್ಪುಗಳನ್ನು ನಿಷ್ಕರ್ಷಿಸಿ ತಿಳಿಯುವುದೇ ಕಷ್ಟವಾಗಿಬಿಡುತ್ತದೆ. ಅಂತಹ ಸಂದರ್ಭಗಳಲ್ಲಿ ಶ್ರೀಮಾತೆ ಶಾರದಾದೇವಿಯವರ ಜೀವನವು ನಮಗೆ ವಿಶೇಷ ಬೆಳಕು ಚೆಲ್ಲಬಲ್ಲುದು.

ಒಮ್ಮೆ ಶ್ರೀಮಾತೆಯವರು ಸೇವಾಕಾರ್ಯಕ್ಕೆ ಸಂಬಂಧಿಸಿದ ಸಮಸ್ಯೆಯೊಂದನ್ನು ಬಗೆಹರಿಸಿದ ಪರಿ ಬಹಳ ಮಾರ್ಮಿಕವಾಗಿದೆ. ಕೋಯಲಪಾರಾದ ರಾಮಕೃಷ್ಣಾಶ್ರಮವು ಒಂದು ಧರ್ಮಾಸ್ಪತ್ರೆಯನ್ನು ನಡೆಸುತ್ತಿತ್ತು. ಧರ್ಮಾಸ್ಪತ್ರೆ ಎಂದಮೇಲೆ ಅದು ಬಡವರ ಉಪಯೋಗಕ್ಕಾಗಿ ಎಂದೇ ಅರ್ಥವಲ್ಲವೇ? ಆದರೆ ಬಡವರ ಜೊತೆಯಲ್ಲಿ ಕೆಲವರು ಅನುಕೂಲಸ್ಥರೂ ಅಲ್ಲಿಗೆ ಬಂದು ಬಿಟ್ಟಿ ಔಷಧಕ್ಕೆ ಕೈಯೊಡ್ಡುತ್ತಿದ್ದರು. ಮಠದ ಮಹಂತರು ಶ್ರೀಮಾತೆಯವರಿಗೆ ಈ ವಿಷಯವನ್ನು ತಿಳಿಸಿ,"ಇಂತಹ ಅಭ್ಯಾಸ ನಿಲ್ಲುವಂತೆ ಮಾಡಬೇಕಲ್ಲವೇ?" ಎಂದು ಕೇಳಿದರು. ಇದಕ್ಕೆ ಶ್ರೀಮಾತೆಯವರು ಏನು ಉತ್ತರ ನೀಡಿದ್ದಿರಬಹುದು? 'ಹೌದು ಮತ್ತೆ! ಬಡವರಿಗಾಗಿ ಅಂತ ತೆರೆದಿರುವ ಆಸ್ಪತ್ರೆಗೆ ಅನುಕೂಲಸ್ಥರೂ ಬಂದು ಲಾಭ ಪಡೆದುಕೊಳ್ಳುವುದೆಂದರೇನರ್ಥ? ಇದನ್ನು ತಪ್ಪಿಸಲೇಬೇಕು. ಆದ್ದರಿಂದ ಆ ಊರಿನ ಬಡವರ ಪಟ್ಟಿ ತಯಾರಿಸಿ, ಅವರಿಗೆಲ್ಲ ಒಂದೊಂದು ಚೀಟಿ ಕೊಟ್ಟು, ಆ ಚೀಟಿಯನ್ನು ತಂದು ತೋರಿಸಿದರೆ ಮಾತ್ರವೇ ಔಷಧಿ ಕೊಡುವ ವ್ಯವಸ್ಥೆ ಮಾಡಿರಿ' ಎಂಬ ಠರಾವು ಹೊರಡಿಸಿದ್ದಿರಬಹುದೇ? ಇಲ್ಲವೇ ಇಲ್ಲ! ಶ್ರೀಮಾತೆಯವರು ಈ ಸಮಸ್ಯೆಯನ್ನು ಕಂಡ ದೃಷ್ಟಿಕೋನವೇ ಬೇರೆ. ನೀರಸವೂ ತಾರ್ಕಿಕವೂ ಆದ ಬೌದ್ಧಿಕ ಸ್ತರಕ್ಕಿಂತಲೂ ಬಹು ಎತ್ತರವೂ ವಿಶಾಲವೂ ಆದ ವಿವೇಕದ ನೆಲೆಗಟ್ಟಿನಿಂದ ಉತ್ತರಿಸುತ್ತಾರೆ ಶ್ರೀಮಾತೆಯವರು: "ನೋಡು, 'ಬೇಕು' ಅಂತ ಬೇಡಿ ಬಂದ ಯಾರನ್ನೇ ಆಗಲಿ, ಬಡವರು ಅಂತಲೇ ತಿಳಿಯಬೇಕು. ಆದ್ದರಿಂದ ಅವರನ್ನು ಬರಿಗೈಯಲ್ಲಿ ಹಿಂದಿರುಗಿಸಬಾರದು."

ಕೈತುಂಬ ಹಣಕಾಸು, ಆಸ್ತಿಪಾಸ್ತಿ, ಒಡವೆ ವಸ್ತುಗಳಿರುವವನೇ ಶ್ರೀಮಂತ, ಇಲ್ಲದವನು ಬಡವ ಎಂಬುದು ನಮ್ಮ ತಿಳಿವಳಿಕೆ. ಆದರೆ ಶ್ರೀಮಾತೆಯವರು ತಿಳಿಸಿಕೊಡುತ್ತಿದ್ದಾರೆ—"ಬೇಕೆಂಬುವನೇ ಬಡವ, ಸಾಕೆಂಬುವನೇ ಶ್ರೀಮಂತ." ಎಂಥ ವಿವೇಕಪೂರ್ಣ ನುಡಿಯಿದು! ವ್ಯವಹಾರ ದೃಷ್ಟಿಯಿಂದಲೂ ಇದು ತುಂಬ ಸೂಕ್ತವೂ ಸುಕರವೂ ಆದ ನಿರ್ಧಾರ. ಏಕೆಂದರೆ ಚಿಕಿತ್ಸೆ ಬೇಡಿ ಬಂದವರನ್ನು "ಇವನು ಬಡವ" "ಇವನು ಅನುಕೂಲಸ್ಥ" ಎಂದು ಬೇರ್ಪಡಿಸುವುದೇ ಒಂದು ದೊಡ್ಡ ಪತ್ತೇದಾರಿ ಕೆಲಸದಂತಾಗಿಬಿಟ್ಟರೆ ಇನ್ನು ಅಲ್ಲಿ ಸೇವೆಯ ಘನತೆಯೆಲ್ಲಿರುತ್ತದೆ? ರಾಮಕೃಷ್ಣ ಆಶ್ರಮದ ಸಾಧು ಬ್ರಹ್ಮಚಾರಿಗಳು ಸೇವೆಯನ್ನು ಕೈಗೊಳ್ಳುವುದರ ಮೂಲ ಉದ್ದೇಶವೇ ಆತ್ಮೋನ್ನತಿ ಸಾಧಿಸಿಕೊಳ್ಳುವುದು. ಆತ್ಮೋನ್ನತಿಗೆ ಸಾಧಕವಾಗದ ಸೇವೆ ಸಾವಿಗೆ ಸಮಾನ! ಅಲ್ಲದೆ ಹೊರನೋಟದಿಂದ ಒಬ್ಬ ವ್ಯಕ್ತಿಯನ್ನು ಅವನು ಬಡವನೋ ಅಥವಾ ಸಿರಿವಂತನೋ ಎಂದು ಕಂಡುಹಿಡಿಯುವುದು ತುಂಬ ಕಷ್ಟ. ಉಡಿಗೆ ತೊಡಿಗೆ ನೋಡಿದಾಗ ವ್ಯಕ್ತಿಯೊಬ್ಬ ಬಡವನಂತೆ ಕಂಡರೂ ಅವನು ಸಾಕಷ್ಟು ಗುಪ್ತಧನವುಳ್ಳ ಶ್ರೀಮಂತನೇ ಆಗಿರಬಹುದು. ಹಾಗೆಯೇ ಲಕ್ಷಣವಾಗಿ ಬಟ್ಟೆ ಹಾಕಿಕೊಂಡವನೂ ನಿಜದಲ್ಲಿ ಬಡವನಾಗಿರಲೂಬಹುದು, ಹೇಳಬಲ್ಲವರಾರು? ಇನ್ನೂ ಒಂದು ವಿಷಯವೇನೆಂದರೆ ಕೆಲವು ಅನುಕೂಲಸ್ಥರು ಈ ಉಚಿತ ಚಿಕಿತ್ಸೆಯ

ಲಾಭ ಪಡೆಯಬಂದಾಗ ಕಾರ್ಯಕರ್ತರ ಸೇವಾಪರತೆಯನ್ನು ಗುರುತಿಸಿ ಒಂದಷ್ಟು ವಂತಿಗೆ ನೀಡುವ ಸಾಧ್ಯತೆಯೂ ಇದೆ! ಹೀಗೆ ಈ ಎಲ್ಲ ದೃಷ್ಟಿಗಳಿಂದಲೂ ಶ್ರೀಮಾತೆಯವರ ನಿರ್ಧಾರ ಅತ್ಯಂತ ಸೂಕ್ತ, ಅನುಕರಣೀಯ.

ಶ್ರೀಮಾತೆಯವರ ದೈನಂದಿನ ಸಾಮಾನ್ಯ ವ್ಯವಹಾರಗಳೂ ಕೂಡ ಅಸಾಮಾನ್ಯ ವಿವೇಕದಿಂದ ಕೂಡಿರುತ್ತಿದ್ದುವು. ಅವರ ಅಪೂರ್ವ ವ್ಯವಹಾರವಿವೇಕವನ್ನು ಪ್ರಕಟಪಡಿಸುವ ಸನ್ನಿವೇಶಗಳು ಬಹಳಷ್ಟಿವೆ. ಉದಾಹರಣೆಗೆ ಇಲ್ಲೊಂದು ಘಟನೆಯನ್ನು ಉಲ್ಲೇಖಿಸಬಹುದು. ಜಯರಾಂಬಾಟಿಯಲ್ಲಿ ಶ್ರೀಮಾತೆಯವರ ಸೇವೆ ಮಾಡುತ್ತಿದ್ದ ಜ್ಞಾನ ಬ್ರಹ್ಮಚಾರಿಗಳು ಹೆಚ್ಚು ಹಣ ಕೊಟ್ಟಾದರೂ ಗಟ್ಟಿಹಾಲು ಪಡೆಯಲೆತ್ನಿಸುತ್ತಿದ್ದರು. ಶ್ರೀಮಾತೆಯವರ ಮನೆಯ ಉಪಯೋಗಕ್ಕಾಗಿ ಎಂದಮೇಲೆ ನೀರುಹಾಲನ್ನು ತರುವುದೆ?—ಇದು ಬ್ರಹ್ಮಚಾರಿಗಳ ಭಾವನೆ. ಒಂದು ದಿನ ಅವರು ಹಾಲಿನವನಿಗೆ ಹೀಗೆಂದರು: "ನೋಡಯ್ಯ, ನೀನು ರೂಪಾಯಿಗೆ ಎಂಟೇ ಸೇರು ಕೊಟ್ಟರೂ ಪರವಾಗಿಲ್ಲ. ಹಾಲು ಮಾತ್ರ ಅಪ್ಪಟವಾಗಿರಬೇಕು, ತಿಳಿಯಿತೋ?" ಬ್ರಹ್ಮಚಾರಿಗಳು ಶ್ರೀಮಾತೆಯವರ ಮೇಲಿಟ್ಟ ಭಕ್ತಿ ನಿಜಕ್ಕೂ ಬಹಳ ದೊಡ್ಡದೇ. ಅಲ್ಲದೆ ಶ್ರೀಮಾತೆಯವರ ಪರಿವಾರದಲ್ಲಿ ಅನೇಕ ಎಳೆಯ ಮಕ್ಕಳೂ ಇದ್ದುದರಿಂದ ಮನೆಯಲ್ಲಿ ಪುಷ್ಟಿಕರವಾದ ಹಾಲಿನ ಅಗತ್ಯ ಇದ್ದೇ ಇತ್ತು. ಆದರೂ ಬ್ರಹ್ಮಚಾರಿಗಳು ಹಾಲಿನ ದರ ಏರಿಸಿದಾಗ ಶ್ರೀಮಾತೆಯವರು ಕೂಡಲೆ ಅವರನ್ನು ಬಳಿಗೆ ಕರೆದು, "ಏನಪ್ಪ ಇದು? ಇಲ್ಲಿ ಮೂರು ಕಾಸಿಗೆ ಒಂದು ಪಾವು ಹಾಲು ಸಿಗುತ್ತದೆ (ಎಂದರೆ ಆಣೆಗೊಂದು ಸೇರು, ರೂಪಾಯಿಗೆ ಹದಿನಾರು ಸೇರು). ಆದ್ದರಿಂದ ಬಡವರೂ ಕೂಡ ಹಾಲನ್ನು ಕೊಂಡು ಕುಡಿಯಲು ಸಾಧ್ಯವಾಗಿದೆ. ಆದರೆ ನೀನೀಗ ಏನೂ ವಿಚಾರ ಮಾಡದೆ ಬೆಲೆ ಏರಿಸುತ್ತೀದ್ದೀಯಲ್ಲ! ಅವನೆಷ್ಟಾದರೂ ಹಾಲಿನವನು. ಹಾಲಿನವರು ಹಾಲಿಗೆ ನೀರು ಸೇರಿಸದೆ ಇರುವುದೇ ಇಲ್ಲ. ಈಗ ನೀನು ಬೆಲೆ ಏರಿಸಿದರೆ ಹೆಚ್ಚು ಹಣ ಸಿಗುತ್ತದೆ ಎಂಬ ಆಸೆಯಿಂದ ಇನ್ನೂ ಹೆಚ್ಚು ನೀರು ಸೇರಿಸುತ್ತಾರೆ ಅಷ್ಟೆ" ಎಂದು ಬುದ್ಧಿ ಹೇಳಿದರು. ಇಲ್ಲಿ ಶ್ರೀಮಾತೆಯವರ ವ್ಯವಹಾರಜ್ಞಾನದ ಜೊತೆಗೆ, ಹಾಲಿನ ಬೆಲೆ ಏರಿಸಿದರೆ ಬಡವರಿಗೆ ಕಷ್ಟವಾಗುತ್ತದೆ ಎಂಬ ಸೂಕ್ಷ್ಮದೆಡೆಗೆ ಅವರು ಗಮನ ಕೊಟ್ಟುದನ್ನು ನಾವು ವಿಶೇಷವಾಗಿ ಲಕ್ಷಿಸಬೇಕು.

ಇನ್ನು ಯೋಗಾಸನಾದಿಗಳ ವಿಷಯದಲ್ಲಿ ಶ್ರೀಮಾತೆಯವರು ನೀಡಿದ ಸಲಹೆ ಸದಾ ಸ್ಮರಣೀಯ. ಒಮ್ಮೆ ಅವರು ಕಾಶಿಗೆ ಹೋಗಿದ್ದಾಗ ಅವರ ಸಂನ್ಯಾಸಿ ಶಿಷ್ಯರೊಬ್ಬರು, "ಅಮ್ಮ, ನಾನು ಸ್ವಲ್ಪ ಪ್ರಾಣಾಯಾಮ ಅಭ್ಯಾಸ ಮಾಡುತ್ತಿದ್ದೇನೆ. ಅದನ್ನು ಹಾಗೇ ಮುಂದುವರಿಸಿಕೊಂಡು ಹೋಗಲೇ?" ಎಂದು ಕೇಳಿದರು. ಅದಕ್ಕೆ ಶ್ರೀಮಾತೆಯವರೆನ್ನುತ್ತಾರೆ: "ಸ್ವಲ್ಪ ಮಾಡಬಹುದು. ಆದರೆ ಅದನ್ನು ಅತಿಯಾಗಿ ಮಾಡಿ ತಲೆಯನ್ನು ಬಿಸಿ ಮಾಡಿಕೊಳ್ಳುವುದು ಒಳ್ಳೆಯದಲ್ಲ. ಮನಸ್ಸು ತನ್ನಷ್ಟಕ್ಕೆ ಸ್ಥಿರವಾಗುವುದಾದರೆ ಪ್ರಾಣಾಯಾಮದ ಅಗತ್ಯವಾದರೂ ಏನಿದೆ?" ಮತ್ತೊಂದು ಸಂದರ್ಭದಲ್ಲಿ ಇದೇ ಸಂನ್ಯಾಸೀ ಶಿಷ್ಯರು, "ನನ್ನ ಶರೀರದ ಆರೋಗ್ಯಕ್ಕಾಗಿ ಈ ಕೆಲವು ದಿನಗಳಿಂದ ಯೋಗಾಸನವನ್ನು ಮಾಡುತ್ತಿದ್ದೇನೆ. ಇದರಿಂದಾಗಿ ಜೀರ್ಣಶಕ್ತಿ ಹೆಚ್ಚಿದೆಯಲ್ಲದೆ ಬ್ರಹ್ಮಚರ್ಯಪಾಲನೆಗೂ ತುಂಬ ಸಹಾಯವಾಗಿದೆ" ಎಂದು ತಿಳಿಸಿದರು. ಆಗ ಶ್ರೀಮಾತೆಯವರು ವಿವೇಕಪೂರ್ಣವಾದ ಮಾತೊಂದನ್ನು ಹೇಳುತ್ತಾರೆ: "ಒಳ್ಳೆಯದು, ಆದರೆ ದೇಹಬುದ್ಧಿ ಹೆಚ್ಚಾಗದಂತೆ ನೋಡಿಕೊ. ಒಂದು ವೇಳೆ ಯೋಗಾಸನ ಮಾಡುವುದನ್ನು ಬಿಟ್ಟರೂ ಆರೋಗ್ಯ ಕೆಡಬಾರದು—ಆ ರೀತಿಯಲ್ಲಿ ಮಾಡು."

ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿದು ಗುರಿ ಮುಟ್ಟಬೇಕೆನ್ನುವವರಿಗೆ ಶ್ರೀಮಾತೆಯವರ ಈ ನುಡಿಗಳು ಬಹು ಉಪಯುಕ್ತವಾದುವೇ ಸರಿ. ಪ್ರಾಣಾಯಾಮದ ಮೂಲ ಉದ್ದೇಶ ಭಗವದ್ಧ್ಯಾನಕ್ಕೆ ಮನಸ್ಸನ್ನು ಅಣಿಗೊಳಿಸಿಕೊಳ್ಳುವುದೆಷ್ಟೋ ಅಷ್ಟೆ. ಹರಿದುಹಂಚಿಹೋದ ಮನಸ್ಸನ್ನು ಏಕಾಗ್ರಗೊಳಿಸಲು ಸಹಾಯಕವಾದ ಉಪಾಯಗಳಲ್ಲಿ ಪ್ರಾಣಾಯಾಮವೂ ಒಂದು, ಅಷ್ಟೆ. ಅಂತೆಯೇ ಯೋಗಾಸನಗಳ ಪಾತ್ರವೂ ಕೂಡ ಅತ್ಯಂತ ಮಿತ. ಯಾವುದಾದರೊಂದು ಆಸನದಲ್ಲಿ—ಒಂದೇ ಭಂಗಿಯಲ್ಲಿ—ದೀರ್ಘಕಾಲ ಕುಳಿತುಕೊಳ್ಳುವುದಕ್ಕಾಗಿ ಹಲವಾರು ಆಸನಗಳ ಅಭ್ಯಾಸ. ಆದರೆ ವಿವಿಧ ಆಸನಗಳನ್ನು ಮಾಡುತ್ತ ಅಂಗಸೌಷ್ಠವಗಳಿಸಿದ ಮಾತ್ರಕ್ಕೆ ಯಾವ ಆಧ್ಯಾತ್ಮಿಕ ಲಾಭವೂ ಆಗಲಾರದು. ಅಷ್ಟೇ ಅಲ್ಲ, ಅಂಗಾಂಗಗಳನ್ನು ತಿರುಗಿಸಿ, ಬಗ್ಗಿಸಿ, ಕುಗ್ಗಿಸಿ, ಹಿಗ್ಗಿಸಿ ಮಾಡುವ ಭರಾಟೆಯಲ್ಲಿ ಮನಸ್ಸು ಶರೀರಮಟ್ಟದಲ್ಲೇ ನಿಂತುಬಿಡುತ್ತದೆ. ಧ್ಯಾನಕ್ಕಾಗಿ ದೀರ್ಘಕಾಲದವರೆಗೆ ಅವಿಚಲವಾಗಿ—ಆದರೆ ಆಯಾಸವಿಲ್ಲದೆ—ಕುಳಿತುಕೊಳ್ಳುವಂತಾದಾಗಲೇ ಯೋಗಾಸನಾಭ್ಯಾಸವು ಸಾರ್ಥಕವೆನಿಸುವುದು. ಆದ್ದರಿಂದಲೇ ಶ್ರೀಮಾತೆಯವರು ಸಾಧಕರಿಗೆ ಯೋಗಾಸನದ ಹೆಸರಿನಲ್ಲಿ ಶರೀರಪ್ರಜ್ಞೆ ಬೆಳೆಯದಂತೆ ನೋಡಿಕೊಳ್ಳಬೇಕೆಂಬ ವಿವೇಕವನ್ನು ಹೇಳುತ್ತಿದ್ದಾರೆ.

ಶ್ರೀಮಾತೆಯವರು ಪವಿತ್ರತಾಸ್ವರೂಪಿಣಿ ಎಂದು ಬಣ್ಣಿಸಲ್ಪಟ್ಟವರು. ಅಷ್ಟೇಕೆ, ಸ್ವತಃ ತಮ್ಮ ಜೀವಿತಾವಧಿಯಲ್ಲೇ ಅಸಂಖ್ಯಾತ ಜನರಿಂದ ಭಗವತಿಯಂತೆ ಪೂಜಿಸಲ್ಪಟ್ಟವರು. ಶ್ರೀಸಾಮಾನ್ಯರ ಮಾತಂತಿರಲಿ, ಆಧ್ಯಾತ್ಮಿಕ ದಿಗ್ಗಜಗಳಂತಿದ್ದ ಸ್ವಾಮಿ ವಿವೇಕಾನಂದ, ಬ್ರಹ್ಮಾನಂದಾದಿ ಸಂನ್ಯಾಸಿಶ್ರೇಷ್ಠರಿಂದಲೂ ಅರ್ಚಿಸಲ್ಪಟ್ಟವರು ಅವರು. ಅಷ್ಟೇ ಅಲ್ಲ, 'ಅವತಾರವರಿಷ್ಠ'ರೆನಿಸಿದ ಶ್ರೀರಾಮಕೃಷ್ಣ ಪರಮಹಂಸರಿಂದಲೇ ಆದ್ಯಾಶಕ್ತಿಯೆಂದು ಆರಾಧಿಸಲ್ಪಟ್ಟವರು. ಇಂತಿದ್ದರೂ ಅವರು ತಮ್ಮ ಲೀಲಾಮಯ ಜೀವನದಲ್ಲಿ ಹೆಜ್ಜೆಹೆಜ್ಜೆಗೂ ಎಷ್ಟು ಎಚ್ಚರ ವಹಿಸುತ್ತಿದ್ದರು, ಎಂಥ ಕಠಿಣ ವಿವೇಕದ ಕಡಿವಾಣದಿಂದ ತಮ್ಮನ್ನು ತಾವು ಬಿಗಿದುಕೊಂಡಿದ್ದರು ಎಂಬುದನ್ನು ತಿಳಿಯುವುದೇ ನಮ್ಮ ಪಾಲಿಗೆ ಒಂದು ವಿಶಿಷ್ಟ ಸಾಧನೆಯಾಗಬಲ್ಲುದು. ನಿದರ್ಶನಕ್ಕಾಗಿ ಇಲ್ಲೊಂದು ಪ್ರಸಂಗವನ್ನು ಪರಿಶೀಲಿಸೋಣ.

ಶ್ರೀಮಾತೆಯವರು ದಕ್ಷಿಣದೇಶದ ತೀರ್ಥಯಾತ್ರೆಯನ್ನು ಮುಗಿಸಿಕೊಂಡು ಕೊಲ್ಕತಾಗೆ ಹಿಂದಿರುಗಿದ ಸಂದರ್ಭದಲ್ಲಿ ಅವರು ಮಠದ ಒಬ್ಬರು ಸಾಧುಗಳ ಕುರಿತಾಗಿ ವಿಚಾರಿಸಿದರು—"ಅವರು

ಎಲ್ಲಿದ್ದಾರೆ, ಏನು ಮಾಡುತ್ತಿದ್ದಾರೆ?" ಎಂದು. ಆಗ ಇತರ ಸಾಧುಗಳು, ಒಂದು ಬಗೆ ಮೆಚ್ಚುಗೆಯ ದನಿಯಲ್ಲಿ ಹೇಳಿದರು: "ಅಮ್ಮ, ಈಗ ಮೂರು-ನಾಲ್ಕು ತಿಂಗಳಿಂದಲೂ ಅವರು ನಿಮ್ಮ ದರ್ಶನಕ್ಕಾಗಿ ಹಾತೊರೆಯುತ್ತಿದ್ದಾರೆ. ನಿಮ್ಮನ್ನು ಕಾಣದೆ ಅವರ ಮನಸ್ಸಿಗೆ ಸಮಾಧಾನವೇ ಇಲ್ಲ." ಈ ಮಾತನ್ನು ಕೇಳಿ ಶ್ರೀಮಾತೆಯವರಿಗೆ ಸಂತೋಷವೆನಿಸಿರಬಹುದಲ್ಲವೇ? ಆದರೆ ಹಾಗಾಗಲಿಲ್ಲ. ಬದಲಾಗಿ ಅವರು ಬೇಸರಿಸಿಕೊಂಡು ಹೇಳಿದರು: "ಇದೆಂಥದಪ್ಪಾ ವಿಚಿತ್ರ! ಸಂನ್ಯಾಸಿಯಾದವನು ಆಸಕ್ತಿ-ಬಂಧನಗಳನ್ನೆಲ್ಲ ಕಡಿದುಹಾಕಿ ಮುಂದೆ ಸಾಗಬೇಕು. ಚಿನ್ನದ ಸರಪಳಿ ಕೂಡ ಬಂಧನವೇ. ಸಂನ್ಯಾಸಿ ಮಾಯೆಯಲ್ಲಿ ಸಿಕ್ಕಿಕೊಳ್ಳದಂತೆ ಜಾಗರೂಕನಾಗಿರಬೇಕು. ಇದೇನಿದು? ಸುಮ್ಮನೆ 'ತಾಯಿಪ್ರೇಮ' 'ತಾಯಿ ಪ್ರೇಮ' ಎನ್ನುತ್ತಿರುವುದು; 'ಓ ನನಗಿನ್ನೂ ಮಾತೃ ವಾತ್ಸಲ್ಯದ ಅನುಗ್ರಹ ಆಗಲಿಲ್ಲ' ಅಂತ ದೂರುವುದು; ಇದೆಲ್ಲ ಏನಪ್ಪ ವಿಚಿತ್ರ! ಗಂಡಸರು ನನ್ನ ಸುತ್ತಮುತ್ತ ಸುಳಿದಾಡುತ್ತಿರುವುದು ನನಗಿಷ್ಟವಾಗುವುದಿಲ್ಲಪ್ಪ. ಎಷ್ಟಾದರೂ ನನ್ನದು ಮಾನವ ಶರೀರವಲ್ಲವೆ? ನನ್ನನ್ನು 'ದೇವಿ' ಎನ್ನುವ ದೃಷ್ಟಿಯಿಂದ ನೋಡುವುದೆಲ್ಲ ಆಮೇಲಿನ ಮಾತು. ನಾನು ಕುಲವಂತ ಹೆಣ್ಣುಮಕ್ಕಳ ಮತ್ತು ಭಕ್ತೆಯರ ಜೊತೆಯಲ್ಲಿರಬೇಕಾಗುತ್ತದೆ. ಆ ಆಶು (ಒಬ್ಬ ತರುಣ ಭಕ್ತ) ಗಂಧ ತೇಯುವ ನೆಪದಲ್ಲಿ, ಅದು-ಇದು ಕೆಲಸದ ನೆಪದಲ್ಲಿ ಮಹಡಿಯ ಮೇಲೆ ಬಂದುಹೋಗುತ್ತಿದ್ದ. ನಾನು ಅವನನ್ನು ಸ್ವಲ್ಪ ಗದರಿಸಿದೆ."

ಇಲ್ಲಿ ಶ್ರೀಮಾತೆಯವರ ಮಾತಿನ ಮರ್ಮ ಮಹತ್ವಗಳನ್ನು ವಿಮರ್ಶಿಸಿ ವಿವೇಚಿಸಿ ಮನಗಾಣಬೇಕು ನಾವು. ನಿಜಕ್ಕೂ ಆಗ ಸಂನ್ಯಾಸಿಗಳು ಶ್ರೀಮಾತೆಯವರ ದರ್ಶನಕ್ಕಾಗಿ ವ್ಯಾಕುಲಿತರಾಗಿದ್ದರೆ, ಅದೇನೂ ತಪ್ಪಲ್ಲ, ಅಸಹಜವಲ್ಲ. ತಾಯಿಯ ದರ್ಶನಕ್ಕಾಗಿ ಮಗು ಕಾತರಗೊಂಡರೆ ಅದರಲ್ಲಿ ಅಸಹಜತೆಯೇನು ಬಂತು? ಮನುಷ್ಯ ಸಂನ್ಯಾಸಿಯಾದರೂ, ಜಗಜ್ಜನನಿಯ ಮುಂದೆ ಅವನೊಂದು ಹಸುಳೆಯಲ್ಲದೆ ಮತ್ತೇನು? ಆದ್ದರಿಂದ ಆ ಸಾಧುಗಳು ಶ್ರೀಮಾತೆಯವರ ದರ್ಶನಕ್ಕಾಗಿ ಹಂಬಲಿಸಿದ್ದರೆ ಅದು ಸರಿಯೇ. ಆದರೆ ಶ್ರೀಮಾತೆಯವರು ಹೇಳುತ್ತಿದ್ದಾರೆ—"ಇದೆಂಥದಪ್ಪಾ ವಿಚಿತ್ರ!.... ಚಿನ್ನದ ಸರಪಣಿ ಕೂಡ ಬಂಧನವೇ. ಸಂನ್ಯಾಸಿಯಾದವನು ಮಾಯೆಯಲ್ಲಿ ಸಿಕ್ಕಿಕೊಳ್ಳದಂತೆ ಜಾಗರೂಕನಾಗಿರಬೇಕು" ಎಂದು. ಆ ಸಂನ್ಯಾಸಿಗಳ ವ್ಯಾಕುಲಪೂರ್ಣ ಕರೆಯನ್ನು ವಾತ್ಸಲ್ಯಮಯಿ ಶ್ರೀಮಾತೆಯವರು ಹೀಗೆ ಕಡೆಗಣಿಸಬಹುದೇ ಎಂದು ನಾವು ಚಕಿತರಾಗಬಹುದು. ಆದರೆ ಇದನ್ನು ಅರ್ಥಮಾಡಿಕೊಳ್ಳಬೇಕಾದರೆ, ಅವರು ಬಳಿಕ ಆಡಿದ ಮತ್ತೊಂದು ಮಾತನ್ನು ಗಮನಿಸಬೇಕು ನಾವು. ಏನದು? "ಎಷ್ಟಾದರೂ ನನ್ನದು ಮಾನವ ಶರೀರವಲ್ಲವೆ? ನನ್ನನ್ನು 'ದೇವಿ' ಎಂಬ ದೃಷ್ಟಿಯಿಂದ ನೋಡುವುದೆಲ್ಲ ಆಮೇಲಿನ ಮಾತು" ಎಂದದ್ದರಲ್ಲಿದೆ ಆ ಉತ್ತರಕ್ಕೆ ಅರ್ಥ. ಮನುಷ್ಯ ಕಾವಿಬಟ್ಟೆ ಉಟ್ಟು ಸಂನ್ಯಾಸಿಯಾದರೂ ಅವನ ಶರೀರ ಗಂಡುಶರೀರವಲ್ಲವೆ? ಸಾಕ್ಷಾತ್ ಜಗನ್ಮಾತೆಯೇ ಅವತಾರತಾಳಿ ಬಂದರೂ ಅವಳ ಶರೀರ ಹೆಣ್ಣುಶರೀರವಲ್ಲವೆ? ಈಗ, ಈ ಗಂಡುಶರೀರದ ಸುತ್ತ ಹೆಣ್ಣುಶರೀರಗಳು, ಹೆಣ್ಣುಶರೀರದ ಸುತ್ತ ಗಂಡುಶರೀರಗಳು ಓಡಾಡಿಕೊಂಡಿದ್ದರೆ ದೂರದಿಂದ ನೋಡುವವರಿಗೆ ಇದು ಸರಿಕಂಡೀತೆ? ಅವರು ದೂರದಿಂದಲೇ ಏನಾದರೂ ಅಬದ್ಧ ಆಡಿಕೊಳ್ಳುವುದಿಲ್ಲವೆ? ಹೀಗೆ ಈ ಸಂನ್ಯಾಸಿಯೇ ಆಗಲಿ, ಸಂನ್ಯಾಸಿನಿಯೇ ಆಗಲಿ, ಕೊನೆಗೆ ಜಗನ್ಮಾತೆಯೇ ಆಗಲಿ, ಜನಕ್ಕೆ ಅಬದ್ಧವಾಡಲು ಅವಕಾಶ ಮಾಡಿಕೊಟ್ಟಂತಾಗುವುದಿಲ್ಲವೆ? ಅಬದ್ಧದ ಮಾತುಗಳು ಹುಟ್ಟಿಕೊಂಡಮೇಲೆ ಇನ್ನವರ ಬೋಧನೆಗೆ ಶಕ್ತಿಯಿರುತ್ತದೆಯೇ? ಆ ಬೋಧನೆಗೆ ಜನ ಬೆಲೆ ಕೊಡುತ್ತಾರೆಯೇ? ಆದ್ದರಿಂದ ಭಾವಾವೇಶದ ಭರದಲ್ಲಿ ವಿವೇಕ ತಪ್ಪಿ ನಡೆಯಬಾರದು ಎಂದು ಆ ಸಂನ್ಯಾಸಿಗಳಿಗೆ ಹೇಳುವ ನೆಪದಲ್ಲಿ, ಇತರರಿಗೂ ಎಚ್ಚರಿಕೆ ನೀಡುತ್ತಿದ್ದಾರೆ ಶ್ರೀಮಾತೆಯವರು.

ಅಲ್ಲದೆ, ಅವರು ಹೀಗೆಂದದ್ದರಲ್ಲಿ ಇನ್ನೂ ಒಂದು ಉದ್ದೇಶವಿತ್ತು. ಏನೆಂದರೆ, ಸ್ವತಃ ಅವರು ಶರೀರಪ್ರಜ್ಞೆಯನ್ನು ಮೀರಿದವರಾಗಿದ್ದರೂ ಅವರ ಸುತ್ತ ಸದಾ ಅವರ ಸಂಬಂಧಿಕರೂ, ಭಕ್ತೆಯರೂ ಆದ ಮಹಿಳೆಯರು-ಯುವತಿಯರು ಇರುತ್ತಿದ್ದರಲ್ಲವೆ? ಹೀಗಿರುವಾಗ ಸಂನ್ಯಾಸಿಗಳೇ ಆಗಿರಲಿ, ಬ್ರಹ್ಮಚಾರಿಗಳೇ ಆಗಿರಲಿ, ಅಥವಾ ಗೃಹಸ್ಥ ಮಹನೀಯರೇ ಆಗಿರಲಿ—ಒಟ್ಟಿನಲ್ಲಿ ಪುರುಷವರ್ಗವು ಶ್ರೀಮಾತೆಯವರ ಬಳಿ ಅತಿಯಾಗಿ ಓಡಾಡಿಕೊಂಡಿದ್ದರೆ ನೋಡುಗರ ಕಣ್ಣಿಗೆ ಹೇಗೆ ಕಂಡೀತು? ಸಾಮಾನ್ಯವಾಗಿ ಯುವತಿಯರ ಮುಂದೆ ಯುವಕರು, ಯುವಕರ ಮುಂದೆ ಯುವತಿಯರು ಅಗತ್ಯಕ್ಕಿಂತ ಸ್ವಲ್ಪ ಹೆಚ್ಚಾಗಿಯೇ ಚೂಟಿಯಾಗಿಬಿಡುತ್ತಾರೆ. ಆಗ ಅವರಲ್ಲಿ ಎಲ್ಲಿಲ್ಲದ ಉತ್ಸಾಹ, ಮಾತಿನ ಚಾಕಚಕ್ಯತೆ ಕಂಡುಬರುತ್ತದೆ. ಇದು ಮನೋನಿಗ್ರಹದ ಅಭಾವವನ್ನು ಸೂಚಿಸುತ್ತದೆ. ಸಾಧಕರ ಪಾಲಿಗಂತೂ ಇದೊಂದು ದೌರ್ಬಲ್ಯದ ಅಂಶ. ಇಂತಹ ದೌರ್ಬಲ್ಯಕ್ಕೆ ಒಳಗಾಗದಂತೆ ಅವರು ಎಚ್ಚರದಿಂದಿರಬೇಕಾಗುತ್ತದೆ. ಆದ್ದರಿಂದಲೇ ಶ್ರೀಮಾತೆಯವರು, "ಆ ಆಶು ಕೆಲಸದ ನೆಪದಲ್ಲಿ ಮಹಡಿಯ ಮೇಲೆ ಬಂದು ಬಂದು ಹೋಗುತ್ತಿದ್ದ. ನಾನು ಅವನನ್ನು ಗದರಿಸಿದೆ" ಎನ್ನುತ್ತಾರೆ. ಶ್ರೀಮಾತೆಯವರ ಮಾರ್ಗದರ್ಶನ ಎಷ್ಟು ಸೂಕ್ಷ್ಮವಾಗಿರುತ್ತಿತ್ತು ಎಂಬುದನ್ನು ನಾವು ಈ ಸಂದರ್ಭದಲ್ಲಿ ಗಮನಿಸಬಹುದಾಗಿದೆ.

ಇಂತಿಂತಹ ವಿವೇಕಬೋಧಕವಾದ ಅನೇಕ ಘಟನಾವಳಿಗಳಿಂದ ಅವರ ಜೀವನ ಸಮೃದ್ಧವಾಗಿದೆ. ಅವುಗಳನ್ನೆಲ್ಲ ಅಧ್ಯಯನ ಮಾಡಿದಾಗ ಶ್ರೀಮಾತೆಯವರು ತಮ್ಮ ನಡೆ-ನುಡಿಯೊಂದೊಂದನ್ನೂ ಎಂತಹ ಸುತೀಕ್ಷ್ಣ ವಿವೇಕಪ್ರಜ್ಞೆಯ ಪಹರೆಗೆ ಒಳಪಡಿಸಿಕೊಂಡಿದ್ದರು ಎಂಬುದನ್ನು ಕಂಡು ನಾವು ರೋಮಾಂಚಿತರಾಗದಿರಲು ಸಾಧ್ಯವಿಲ್ಲ! ನಿಜಕ್ಕೂ ಶ್ರೀಮಾತೆಯವರು ಸ್ವತಃ ತಾವು ಪರಿಪೂರ್ಣ ವಿವೇಕದಿಂದ ಬಾಳುವುದರ ಮೂಲಕವೇ ಇತರರಲ್ಲೂ ವಿವೇಕವನ್ನು ಬೆಳಗಿದರು!